MS – 057

-28-

# IV Semester B.Com. Examination, May/June 2014
## (Repeaters) (2011-12 Only)
## ಕನ್ನಡ ಭಾಷಾ ಪತ್ರಿಕೆ – IV
## ಸಾಹಿತ್ಯ ಸಲ್ಲಾಪ – 2 ಮತ್ತು ವ್ಯಾವಹಾರಿಕ ಕನ್ನಡ

Time : 3 Hours                                                                 Max. Marks : 90

### ಭಾಗ - 1
### (ಸಾಹಿತ್ಯ ಸಲ್ಲಾಪ - 2)

ST. CLARET COLLEGE LIBRARY

I. ಭಾವಾರ್ಥವನ್ನು ಬರೆಯಿರಿ : (1×5=5)

ಏನು ಬಂದಿರಿ ಹದುಳವಿದ್ದಿರೆ ? ಎಂದರೆ
ನಿಮ್ಮ ಮೈಸಿರಿ ಹಾರಿ ಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಸಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮ ದೇವನು ?

II. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ : (3×5=15)

1) ಮನುಷ್ಯರ ಗುಣಸ್ವಭಾವವನ್ನು ಶರಣರು ನಿಷ್ಠುರವಾಗಿ ಗುರುತಿಸುವ ಬಗೆ ಹೇಗೆ ?

2) ಸರೋಜಳಿಗೆ ತನ್ನ ಮದುವೆಯ ನಂತರದ ಬದುಕಿನ ಬಗೆಗಿದ್ದ ಕನಸುಗಳೇನು ?

3) ಗ್ರಹಣ ಕಾಲದಲ್ಲಿ ದೃಶ್ಯ ಮಾಧ್ಯಮಗಳ ವರ್ತನೆಗಳ ಬಗ್ಗೆ ಲೇಖಕರ ಅಭಿಪ್ರಾಯವೇನು ?

4) ಮಾರನು ಆಕಸ್ಮಾತ್ತಾಗಿ ತಾನು ಕೈ ಕೊಯ್ದುಕೊಂಡ ಬಗ್ಗೆ ಹೇಳಿದ ಕಥೆ ಏನು ?

5) ಲೇಖಕರು ಗುರುತಿಸುವ ಕೈಗಾರಿಕೀಕರಣದ ಸಕಾರಾತ್ಮಕ ಬೆಳವಣಿಗೆಗಳು ಯಾವುವು ?

III. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ : (3×10=30)

1) ಡಾಂಭಿಕ ಭಕ್ತಿಯನ್ನು ವಚನಕಾರರು ಹೇಗೆ ವಿಡಂಬಿಸುತ್ತಾರೆ ? ವಿವರಿಸಿ.

2) ಪುಸ್ತಕ, ವೃಕ್ಷ, ನದಿ – ಈ ಸಂಕೇತಗಳ ಮೂಲಕ ಬುದ್ಧನನ್ನು ಅರಿಯುವ ಪರಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ ?

3) ಕಥಾನಾಯಕಿ ಸರೋಜಳಿಗೆ ಸಿಕ್ಕ 'ಬಿಡುಗಡೆ' ಎಂಥದು ? ವಿವರಿಸಿ.

4) 'ಮಾರನ ಕತೆಗಳು ಸುಳ್ಳಾಗಿದ್ದರೂ ಸುಂದರವಾಗಿರುತ್ತಿದ್ದವು'' – ಈ ಹೇಳಿಕೆಯನ್ನು ವಿವರಿಸಿ.

5) ಬದಲಾದ ಉದ್ಯೋಗದ ಸ್ವರೂಪ, ಬದುಕಿನ ಶೈಲಿಯಲ್ಲಾದ ಪಲ್ಲಟಗಳಿಗೆ ಜಾಗತೀಕರಣ ಕಾರಣವೇ ? ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

## ಭಾಗ - 2
## (ವ್ಯಾವಹಾರಿಕ ಕನ್ನಡ)

IV. ಯಾವುದಾದರೂ **ನಾಲ್ಕು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ : **(4×5=20)**

1) ಸಂದರ್ಶನವನ್ನಾಧರಿಸಿದ ವರದಿಗಳು.

2) ಸಂಕ್ಷಿಪ್ತ ಜಾಹೀರಾತು.

3) ತಿಳುವಳಿಕೆ ಪತ್ರ ಹಾಗೂ ಕಾರ್ಯಸೂಚಿ.

4) ಕನ್ನಡ ಮತ್ತು ಕಂಪ್ಯೂಟರ್.

5) ಸಮಿತಿ ವರದಿಗಳು.

6) ಕಾರ್ಯಕ್ರಮ ಪಟ್ಟಿ

V. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ : **(2×10=20)**

1) ಕಾಲೇಜಿನ ಗ್ರಂಥಾಲಯ ಸೌಲಭ್ಯವನ್ನು ಸುಧಾರಿಸುವ ಬಗ್ಗೆ ಅಧ್ಯಾಪಕರೊಬ್ಬರು ಪ್ರಾಂಶುಪಾಲರಿಗೆ ನೀಡುವ ಏಕವ್ಯಕ್ತಿ ವರದಿಯನ್ನು ತಯಾರಿಸಿ.

2) ವರದಿ ಎಂದರೇನು ? ನಿಮ್ಮ ಕಾಲೇಜಿನ ಕನ್ನಡ ಸಂಘದ ಕಾರ್ಯಕ್ರಮಗಳ ವಾರ್ಷಿಕ ವರದಿಯೊಂದನ್ನು ಸಿದ್ಧಪಡಿಸಿ.

3) ಕನ್ನಡ ಮತ್ತು ಅಂತರ್ಜಾಲದ ಸ್ವರೂಪವನ್ನು ಕುರಿತು ಬರೆಯಿರಿ.

4) ಜಾಹೀರಾತುಗಳ ನಿಯೋಗ ಅಥವಾ ಕೆಲಸಗಳಾವುವು ? ಚರ್ಚಿಸಿ.

www.onlinebu.com